OS 143/2018
ಪಿ ಡಬ್ಲೂ 1

ದಿನಾಂಕ 19.12.2023 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಎಮ್. ಪಿ ವಕೀಲರಿಂದಃ-

4. ನನ್ನ ತಂದೆ ಮೂಲತಃ ತಡಸ ಗ್ರಾಮದವರು. 60 ವರ್ಷಗಳ ಹಿಂದೆ ನನ್ನ ತಂದೆ ಕವಲಿ ಗ್ರಾಮಕ್ಕೆ ಬಂದಿರುತ್ತಾರೆ. ನಾವು ತಡಸ ಗ್ರಾಮದಿಂದ ಕವಲಿ ಗ್ರಾಮಕ್ಕೆ ವಲಸೆ ಬಂದಾಗ ನಮ್ಮ ಕುಟುಂಬಕ್ಕೆ ಯಾವುದೇ ಸ್ವತ್ತು ಇರಲಿಲ್ಲ ಎಂದರೆ ಸರಿ. ನಾವು ತಡಸ ಗ್ರಾಮದಿಂದ ಕವಲಿ ಗ್ರಾಮಕ್ಕೆ ವಲಸೆ ಬಂದಿದ್ದೇವೆ ಎಂದರೆ ಸರಿ. ಯಾವ ಸ್ವತ್ತಿಗೆ ಕಂದಾಯ ಕಟ್ಟಿದ್ದೇನೆ ಮತ್ತು ಅದರ ರಶೀದಿಯನ್ನು ಹಾಜರಪಡಿಸಿರುತ್ತೇನೆ. ಕ್ರ. ಸಂ. 124, ಆಸ್ತಿ ನಂ. 5 ಕ್ಕೆ ಕಂದಾಯ ಕಟ್ಟಿದ್ದೇನೆ .ಕ್ರ. ಸಂ. 124, ಆಸ್ತಿ ನಂ. 5 ಕ್ಕೆ ಇ- ಸ್ವತ್ತು ಆಗಿರುವುದಿಲ್ಲ. ಸದರಿ ಸ್ವತ್ತಿಗೆ ಉದ್ದ- ಅಗಲ ಇರುತ್ತದೆ. ಪಂಚಾಯಿತಿಯವರು ಸದರಿ ಸ್ವತ್ತಿಗೆ ಉದ್ದ – ಅಗಲವನ್ನು ತಿಳಿಸಿರುತ್ತಾರೆ. ಸದರಿ ಅಳತೆ ಮಾಡಿದ ದಾಖಲಾತಿಯನ್ನು ಹಾಜರಪಡಿಸಲಾಗಿದೆಯೋ, ಇಲ್ಲವೋ ಗೊತ್ತಿಲ್ಲ ವಕೀಲರಿಗೆ ಕೊಟ್ಟಿರುತ್ತೇನೆ. ಖಾ.ನಂ. 5 ರ ಸ್ವತ್ತು ಕವಲಿ ಗ್ರಾಮದ ಮಧ್ಯದಲ್ಲಿ ಬರುತ್ತದೆ ಎಂದರೆ ಸರಿ.

5. ಗಂಗಾಧರಪ್ಪ ಬಿನ್ ತಿರುಕಪ್ಪರವರ ಹೆಸರಿಗೆ ಇರುವ ಖಾ.ನಂ. 5 ರ ಸ್ವತ್ತು ಎಲ್ಲಿ ಬರುತ್ತದೆ ಎಂದು ಗೊತ್ತಿಲ್ಲ. ರಾಜು ಬಿನ್ ಬಸವರಾಜಪ್ಪ ರವರ ಸ್ವತ್ತು ಊರಿನ ಮಧ್ಯಭಾಗದಲ್ಲಿದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣದ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ. ದಾವಾ ಸ್ವತ್ತು 110 ಇಂಟು 80 ಅಡಿ ಇರುತ್ತದೆ. ಸದರಿ ದಾಖಲಾತಿಯನ್ನು ಕಡತದಲ್ಲಿ ಗುರುತಿಸಲು ಆಗುವುದಿಲ್ಲ ಕಾರಣ ನಾನು ಓದಿಲ್ಲ. ನಾನು ಹೇಳುವಂತೆ ಸದರಿ 110 ಇಂಟು 80 ಅಡಿ ಜಾಗಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಳತೆ 60 ಇಂಟು 60 ಇತ್ತು ಎಂದು ತೋರಿಸಲು ದಾಖಲಾತಿ ಹಾಜರಪಡಿಸಿಲ್ಲ. ಪಂಚಾಯಿತಿಯವರು 110 ಇಂಟು 80 ಅಡಿ ಇದ್ದುದನ್ನು 60 ಇಂಟು 60 ಅಡಿ ಎಂದು ತಿದ್ದಿರುತ್ತಾರೆ. ತೊಗರ್ಸಿ ಗ್ರಾಮ ಪಂಚಾಯಿತಿಯಲ್ಲಿ ನಾನು ಹೇಳಿದ ದಾವಾ ಸ್ವತ್ತು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

6. ಪ್ರತಿವಾದಿಯರ ಸ್ವತ್ತು ನನಗೆ ಗೊತ್ತಿಲ್ಲ ಮತ್ತು ನೋಡಿಲ್ಲ. ಪ್ರತಿವಾದಿಯರ ಕ್ರ. ಸಂ. 106, ಆಸ್ತಿ ಸಂ. 115/2 ಪಿ1 ಎಂದರೆ ನಮ್ಮ ಸ್ವತ್ತಿನ ಬಳಿ ಆ ರೀತಿ ಯಾವುದೇ ಸ್ವತ್ತು ಇಲ್ಲ ಎನ್ನುತ್ತಾರೆ. ಪ್ರತಿವಾದಿಯರ ಸ್ವತ್ತಿನ ಸುತ್ತ ಕಲ್ಲುಕಂಬ ಇರುವುದನ್ನು ನಾನು ನೋಡಿಲ್ಲ. ಪ್ರತಿವಾದಿಯರು ಸದರಿ ಆಸ್ತಿ ಸಂ. 115/2 ಪಿ1 ರಲ್ಲಿ ಫೌಂಡೇಶನ್ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸ್ವತ್ತಿನಲ್ಲಿ ಫೌಂಡೇಶನ್ ಹಾಕಿದ್ದಾರೆ ಎನ್ನುತ್ತಾರೆ. ನಮ್ಮ ಸ್ವತ್ತಿನ ಚಕ್ಕುಬಂದಿ ಹೇಳುತ್ತೇನೆ. ಪೂರ್ವಕ್ಕೆ- ಹೇಮಪ್ಪರವರ ಸ್ವತ್ತು. ಪಶ್ಚಿಮಕ್ಕೆ - ಪಂಚಾಯಿತಿಯವರ ಬಿಲ್ಡಿಂಗ್, ದಕ್ಷಿಣಕ್ಕೆ- ಗುತ್ಯಪ್ಪ ಅಜ್ಜಪ್ಪರವರ ಸ್ವತ್ತು, ಉತ್ತರಕ್ಕೆ - ಪಂಚಾಯಿತಿ ಮುಖ್ಯ ರಸ್ತೆ ಇರುತ್ತದೆ. ಪ್ರತಿವಾದಿಯರ ಸ್ವತ್ತಿನ ಪಕ್ಕ ಗ್ರಾಮ ಪಂಚಾಯಿತಿ ಕಟ್ಟಡ ಇದೆ ಎಂದರೆ ಸಾಕ್ಷಿಯು ಪ್ರತಿವಾದಿಯರ ಸ್ವತ್ತು ಎಲ್ಲಿ ಇದೆಯೋ ಗೊತ್ತಿಲ್ಲ, ಆದರೆ ಗ್ರಾಮ ಪಂಚಾಯಿತಿ ಕಟ್ಟಡ ಆಸ್ತಿ ಸಂ. 5 ರ ಪಕ್ಕದಲ್ಲಿರುವ ಆಸ್ತಿ ಸಂ. 6 ರಲ್ಲಿರುತ್ತದೆ ಎನ್ನುತ್ತಾರೆ. ಗ್ರಾಮ ಪಂಚಾಯಿತಿ ಕಟ್ಟಡ ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಇರುತ್ತದೆ.

7. ವಾದಿಯರ ಸ್ವತ್ತು ಖಾ. ನಂ. 1 ರಿಂದ 5 ರೊಳಗೆ ಬರುವುದಿಲ್ಲ ಎಂದು ಗ್ರಾಮ ಪಂಚಾಯಿತಿಯವರು ದೃಢೀಕರಣ ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ಸಂ. 115/2 ಪಿ1 ರ ಸ್ವತ್ತು ಪ್ರತಿವಾದಿಯರಿಗೆ ಸೇರಿದ ಸ್ವತ್ತು ಎಂದರೆ ಗೊತ್ತಿಲ್ಲ. ಮಾಹಿತಿ ಹಕ್ಕು ಕಾಯ್ದೆ ಕೆಳಗೆ ನಾನು ಗ್ರಾಮ ಪಂಚಾಯಿತಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕೊಡುವಂತೆ 30.09.2018 ರಂದು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿಗೆ ಉತ್ತರವಾಗಿ ಗ್ರಾಮ ಪಂಚಾಯಿತಿಯವರು ನಮಗೆ ಸೇರಿದ ಯಾವುದೇ ಸ್ವತ್ತು ಅಥವಾ ಎಮ್ ಆರ್ ಇರುವುದಿಲ್ಲ ಎಂದು ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಹೊಸ ಕವಲಿ ಗ್ರಾಮದಲ್ಲಿ ನನ್ನ ತಂದೆ ಹೆಸರಿಗೆ ಖಾ. ನಂ. 7 ರ ಸ್ವತ್ತು ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನನ್ನ ತಂದೆ ರಾಮಕೃಷ್ಣ ಬಿನ್ ಭರಮಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಖಾ. ನಂ. 5 ರಲ್ಲಿ ರಾಜು, ಚನ್ನಬಸಪ್ಪ, ಗಂಗಾಧರಪ್ಪ ಎನ್ನುವವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

8. ಸ. ನಂ. 160 ರಲ್ಲಿ 30 ಇಂಟು 40 ಅಳತೆಯ ಸೈಟ್ ನಮ್ಮ ತಂದೆಗೆ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರು ಪರವಾನಿಗೆ ಪಡೆದುಕೊಂಡು ಅವರ ಸ್ವತ್ತಿನಲ್ಲಿ ಮನೆ ಕಟ್ಟುತ್ತಿದ್ದಾಗ ನಾನು ತಡೆದಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ನಮ್ಮ ಸ್ವತ್ತಿನಲ್ಲಿ ಮನೆ ಕಟ್ಟಲು ಬಂದಿದ್ದರು ಆದ್ದರಿಂದ ತಡೆದಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿಯರು ನನ್ನ ವಿರುದ್ಧ ಅ. ದಾ. 167/18 ನ್ನು ಸಲ್ಲಿಸಿ ತಾತ್ಕಾಲಿಕ ನಿರ್ಭಂಧಕಾಜ್ಞೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ಜಾಗ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕವಲಿ ಗ್ರಾಮದಲ್ಲಿ ನಮಗೆ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ. ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.